**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ**

CW 11 PW 7

ಸಿ.ಸಿ. ನಂ. 59/2021

| | |
|---|---|
| ಹೆಸರು | ಃ ಮಲ್ಲಿನಾಥ |
| ತಂದೆಯ ಹೆಸರು | ಃ ಹನಮಂತ |
| ವಯಸ್ಸು | ಃ 56 ವರ್ಷ |
| ಉದ್ಯೋಗ | ಃ ವ್ಯಾಪಾರ |
| ವಾಸ | ಃ ಮುಡಬೂಳ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 13-11-2025.**

**ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನಾನು ಮೂಡಬುಳ ಗ್ರಾಮದಲ್ಲಿ ಕಳೆದ 3 ವರ್ಷಗಳಿಂದ fertilizer ವ್ಯಾಪಾರವನ್ನು ಮಾಡಿಕೊಂಡಿರುತ್ತೇನೆ. 1 ನೇ ಆರೋಪಿಯು fertilizer ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ನಾನು ಅವರಿಗೆ ಡಿಎಪಿ ಗೊಬ್ಬರವನ್ನು ತರಲು ತಿಳಿಸಿರುತ್ತೇನೆ ಅದರಂತೆ ಅವರು ದಿಃ 10-08-2020 ರಂದು ಒಂದು ಲಾರಿಯಲ್ಲಿ ಸುಮಾರು 298 ಚೀಲ ಜೈ ಕಿಶಾನ ಮಂಗಳ ಡಿಎಪಿ ಗೊಬ್ಬರವನ್ನು ಲೋಡ ಮಾಡಿಕೊಂಡು ಬಂದು ನಮ್ಮ ಅಂಗಡಿಯಲ್ಲಿ ಇಳಿಸಿರುತ್ತಾರೆ. 1 ನೇ ಆರೋಪಿಯೊಂದಿಗೆ 2 ನೇ ಆರೋಪಿಯೂ ಕೂಡಾ ಬಂದಿದ್ದು ನಾನು ಸದರಿಯವರಿಗೆ ಗೊಬ್ಬರಕ್ಕೆ ಸಂಬಂದಪಟ್ಟ ಬಿಲ್ಲುಗಳನ್ನು ಕೇಳಿದಾಗ ಅವರು ತಂದು ಕೊಡುವುದಾಗಿ ತಿಳಿಸಿರುತ್ತಾರೆ. ನನ್ನ ಹತ್ತಿರ ಹಣವಿಲ್ಲದ ಕಾರಣ ನಾನು ಅವರಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ. ನಮ್ಮ ಅಂಗಡಿಯಲ್ಲಿ ಇಳಿಸಿದ ಸದರಿ ಗೊಬ್ಬರದಿಂದ ವಿಚಿತ್ರ ವಾಸನೆ ಬರುತ್ತಿದರಿಂದ ನಾನು 1 ನೇ ಆರೋಪಿಗೆ ಸದರಿ ಗೊಬ್ಬರ ಬೇಡ ತೆಗೆದುಕೊಂಡು ಹೋಗುವಂತೆ ತಿಳಿಸಿರುತ್ತೇನೆ. ದಿಃ 15-08-2020 ರಂದು 1 ರಿಂದ 3 ಆರೋಪಿತರು ಮಹಾಂತೇಶ ಮಾಲಗತ್ತಿ ಇವರ ಲಾರಿಯನ್ನು ನಮ್ಮ ಅಂಗಡಿಗೆ

ತರಿಸಿ ಲಾರಿಯಲ್ಲಿ ಸದರಿ 298 ಚೀಲ ಗೊಬ್ಬರವನ್ನು ಲೋಡ ಮಾಡಿಕೊಂಡು 4 ನೇ ಆರೋಪಿಗೆ ಅದನ್ನು ಇಟಗಾ ಎಸ್ ಗ್ರಾಮಕ್ಕೆ ತೆಗೆದುಕೊಂಡು ಹೋಗಲು ತಿಸಿರುತ್ತಾರೆ. ನಾನು ಈ ಕುರಿತಂತೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ 1 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸಿದ್ದು, 2 ಮತ್ತು 3 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತಿನ ಬಗ್ಗೆ ಅವರ ಮಾನ್ಯ ವಕೀಲರು ತಮ್ಮ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟಿ ಸವಾಲು 1 ಮತ್ತು 2 ನೇ ಆರೋಪಿತರ ಪರವಾಗಿ ಶ್ರೀ TN ಮಾನ್ಯ ವಕೀಲರಿಂದ-**

2. ನಾನು ಸದರಿ ಗೊಬ್ಬರದ ಅಂಗಡಿಯನ್ನು ನಡೆಸಲು ಸನ್ 2016 ರಲ್ಲಿ ಪರವಾನಿಗೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಪರವಾನಿಗೆಯನ್ನು ನಾನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ನನ್ನ ಸದರಿ ಅಂಗಡಿಯ ಹೆಸರು ಸಿದ್ದರಾಮೇಶ್ವರ Argo Agency ಎಂದು ಇರುತ್ತದೆ. ಆದರೆ ನನಗೆ ಅದರ ಸಂಖ್ಯೆ ನೆನಪಿರುವುದಿಲ್ಲ. ನನ್ನ ಸದರಿ ಅಂಗಡಿಯು ನಮ್ಮ ಊರಿನ ಬೀರಲಿಂಗೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿದ್ದು, ಸದರಿ ಅಂಗಡಿಯು ನನ್ನ ಮಗನ ಹೆಸರಿನಲಿರುತ್ತದೆ. ನನ್ನ ಸದರಿ ಅಂಗಡಿ ಅಳತೆ 10 x 10 ಇರುತ್ತದೆ. ನನ್ನ ಹೆಸರಿನಲ್ಲಿರುವ ಒಂದು ಖಾಲಿ ಜಾಗದಲ್ಲಿರುವ ಒಂದು ಶೆಡ್ಡಿನಲ್ಲಿ ನಾನು ಸದರಿ ರಸಗೊಬ್ಬರದ ಸಾಮಗ್ರಿಗಳನ್ನು ಇಡುತ್ತೇನೆ. ಸದರಿ ಶೆಡ್ಡಿನ ಅಳತೆ 15 x 20 ಇರುತ್ತದೆ. ಸದರಿ ಅಂಗಡಿ ನನ್ನ ಮಗನ ಹೆಸರಿನಲ್ಲಿರುತ್ತದೆ ಹಾಗೂ ಸದರಿ ಶೆಡ್ಡನ್ನು ಪಂಚಾಯತಿರ ಅನುಮತಿಯ ಮೇರೆಗೆ ನಾನು ಹೊಂದಿರುತ್ತೇನೆ ಎಂದು ಹೇಳಲು ಪೋಲಿಸರಿಗೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ. ಸಾಕ್ಷಿಗೆ ಈಗ ನೀವು ನಿಮ್ಮ ಅಂಗಡಿಯಲ್ಲಿ stock register ನ್ನು ಇಟ್ಟಿರುತ್ತೀರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಪ್ರಸ್ತುತ ಪ್ರಕರಣಕ್ಕಾದಂತೆ ತಾವು ಸದರಿ 298 ಚೀಲದ ಗೊಬ್ಬರವನ್ನು order ಮಾಡಿರುವುದಾಗಿ ಹೇಳುತ್ತಾರೆ. 1 ನೇ ಆರೋಪಿಯು ಯಾವ ಅಂಗಡಿಯಿಂದ ಸದರಿ ಗೊಬ್ಬರದ ಚೀಲಗಳನ್ನು ತಂದು ಕೊಟ್ಟಿರುತ್ತಾರೆ ಎಂದು ನಾನು ಅವರಿಂದ ಯಾವುದೇ ರಶೀದಿ

ಪಡೆದುಕೊಂಡಿರುವುದಿಲ್ಲ ಹಾಗೂ ನಾನು ಅವರಿಗೆ ಸದರಿ ಗೊಬ್ಬರದ ಚೀಲಗಳನ್ನು ಎಲ್ಲಿಂದ ತಂದಿರುತ್ತಾರೆ ಎಂದೂ ಕೂಡಾ ವಿಚಾರಿಸಿರುವುದಿಲ್ಲ. 1 ನೇ ಆರೋಪಿಯು ನನ್ನ ಅಂಗಡಿಯಲ್ಲಿ ಸದರಿ ಗೊಬ್ಬರದ ಚೀಲಗಳನ್ನು ತಂದಿಟ್ಟಿರುತ್ತಾರೆ ಎಂದು ಹೇಳಲು ನನ್ನ ಹತ್ತಿರ ಯಾವುದೇ ಆಧಾರ ಇರುವುದಿಲ್ಲ. 1 ನೇ ಆರೋಪಿಯು ಸದರಿ ಚೀಲಗಳ ರಶೀದಿಯನ್ನು ನಂತರ ತಂದು ಕೊಡುವುದಾಗಿ ಹೇಳಿರುತ್ತಾರೆ. ಸದರಿ ಗೊಬ್ಬರದ ಚೀಲಗಳನ್ನು ನನ್ನ ಅಂಗಡಿಯಲ್ಲಿ ಯಾವ ಯಾವ ಹೆಸರಿನ ಲೇಬರಗಳನ್ನು ಇಳಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಗೊಬ್ಬರದ ಚೀಲಗಳನ್ನು ನನ್ನ ಮಗ ನಾಗರಾಜ ಇವರ ಮುಖಾಂತರ ಇಳಿಸಿರುತ್ತೇನೆ. ನಾನು ಸದರಿ ಗೊಬ್ಬರದ ಚೀಲಗಳನ್ನು ಇಳಿಸುವಾಗ ಹಾಗೂ ಅವುಗಳನ್ನು ಆರೋಪಿತರು ತೆಗೆದುಕೊಂಡು ಹೋಗುವಾಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಘಟನೆ ನಂತರ ನನಗೆ ಯಾರು ಬಂದು ವಿಚಾರಿಸಿರುವುದಿಲ್ಲ. PSI ರವರು ನನಗೆ ದಿಃ 30-08-2020 ರಂದು ಬರಲು ಹೇಳಿದ್ದರಿಂದ ನಾನು ಠಾಣೆಗೆ ಹೋಗಿರುತ್ತೇನೆ. ನಾನು ಸದರಿ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ನಾನು ಸದರಿ ಅಂಗಡಿಯನ್ನು ನಡೆಸಲು ಯಾವುದೇ ಪರವಾನಿಗೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಗೊಬ್ಬರದ ಅಂಗಡಿ ಹಾಗೂ ಶೆಡ್ಡನ್ನು ಹೊಂದಿರುವುದಿಲ್ಲ ಯಾವುದೇ ಆರೋಪಿಯು ನನ್ನ ಅಂಗಡಿಯಲ್ಲಿ ಯಾವುದೇ ಗೊಬ್ಬರದ ಚೀಲವನ್ನು ಇಳಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ಸದರಿ ಗೊಬ್ಬರದ ಚೀಲಗಳನ್ನು ನನ್ನ ಅಂಗಡಿಗೆ ಒಂದು ಲಾರಿಯಲ್ಲಿ ತಂದಿದ್ದು ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನನ್ನ ಅಂಗಡಿಗೆ ಯಾರು ಸದರಿ ಗೊಬ್ಬರದ ಚೀಲಗಳನ್ನು ತೆಗೆದುಕೊಂಡು ಹೋಗಲು ಬಂದಿರುವುದಿಲ್ಲ ಹಾಗೂ ಅವುಗಳನ್ನು ಇಟಗಾ ಎಸ್ ಗ್ರಾಮಕ್ಕೆ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 3 ಮತ್ತು 4 ನೇ ಆರೋಪಿತ ಪರ ಶ್ರೀ SS ಮಾನ್ಯ ವಕೀಲರಿಂದ**

3. 1 ನೇ ಆರೋಪಿಯು ಸದರಿ ಗೊಬ್ಬರದ ಚೀಲಗಳ ಮೌಲ್ಯವನ್ನು ನನಗೆ ಬಾಯಿ ಮಾತಿನ ಮೂಲಕವು ಕುಡಾ ತಿಳಿಸಿರುವುದಿಲ್ಲ. 4 ನೇ ಆರೋಪಿಯು ನಮ್ಮ ಊರಿನವರಾಗಿದ್ದು ಬೇರಯವರ ಲಾರಿಯನ್ನು ಓಡಿಸುತ್ತಾರೆ ಎಂದರೆ ಸರಿ. ಸದರಿ ಗೊಬ್ಬರದ ಚೀಲಗಳಿಗೂ ಹಾಗೂ 4 ನೇ ಆರೋಪಿಗೆ ಯಾವುದೇ ರೀತಿಯಾದ ಸಂಬಂದ ಇರುವುದಿಲ್ಲ ಎಂದರೆ ಸರಿ. ನಾನು 3 ನೇ ಆರೋಪಿಯನ್ನು ನೋಡಿರುವುದಿಲ್ಲ. 3 ನೇ ಆರೋಪಿಗೂ ಸದರಿ ಗೊಬ್ಬರದ ಚೀಲಗಳಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿ. ಪೊಲೀಸರ ಹೇಳಿದ್ದರ ಮರೆಗೆ ನಾನು 3 ನೇ ಆರೋಪಿಯ ಹೆಸರನ್ನು ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ಗೊಬ್ಬರದ ಚೀಲಗಳನ್ನು ನಾನು ಯಾರಿಗೂ ಮಾರಾಟ ಮಾಡಿರುವುದಿಲ್ಲ. 1 ರಿಂದ 3 ನೇ ಆರೋಪಿತರು ನನಗೆ ನಕಲಿ ಗೊಬ್ಬರವನ್ನು ಕೊಟ್ಟಿರುತ್ತಾರೆ ಎಂದು ಹೇಳಿ ನಾನು ಅವರ ವಿರುದ್ದ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ. ಕೃಷಿ ಅಧಿಕಾರಿಗಳು, ನಾನು ಹಾಗೂ ಪೊಲೀಸರು ಶಾಮಿಲಾಗಿ ಆರೋಪಿತರ ವಿರುದ್ದ ಸುಳ್ಳಾದ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.